ಡಿ ಡಬ್ಲ್ಯೂ ಃ **1 -**

ಸಾಕ್ಷಿಗೆ ದಿನಾಂಕಃ **04.07.2026** ರಂದು ಪ್ರಮಾಣ ವಚನ ಬೋಧಿಸಲಾಯಿತು**.**

<u>ಪಾಟೀ ಸವಾಲು**:** ವಾದಿ ಪರಃ ವಕೀಲರ ಮೂಲಕ ಃ</u>

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಮತ್ತು ಇಂಗ್ಲೀಶ್ ಓದಲು ಮತ್ತು ಬರೆಯಲು ಬರುತ್ತದೆ. ವಾದಿಯು ಯಾವ ಉದ್ದೇಶಕ್ಕೆ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಾನು ನಮ್ಮ ವಕೀಲರ ಕಛೇರಿಗೆ ಯಾವತ್ತೂ ಹೋಗಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುತ್ತದೆ. ಸದರಿ ಪ್ರಮಾಣ ಪತ್ರವನ್ನು ತಯಾರು ಮಾಡಿಸಲು ಮಂಡ್ಯದಲ್ಲಿ ಮಾಹಿತಿ  ನೀಡಿರುತ್ತೇನೆ. ನನಗೆ ಇಂಗ್ಲೀಶ್ ಸರಿಯಾಗಿ ಓದಿ ಅರ್ಥ ಮಾಡಿಕೊಳ್ಳಲು ಆಗುವುದಿಲ್ಲ. ವಾದಿಯು ನನಗೆ ಗೊತ್ತಿರುವುದಿಲ್ಲ. ಪಿ.ಟಿ.ಸಿ.ಎಲ್. ಕಾಯ್ದೆಯ ಪ್ರಕಾರ ದಾವಾ ಸ್ವತ್ತು ನಮ್ಮ ಕುಟುಂಬಕ್ಕೆ ಬಂದಿರುತ್ತದೆ.  ಅದು ನನ್ನ ತಂದೆಯ ಹೆಸರಿಗೆ ಬಂದಿತ್ತು. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತು ವಾದಿಗೆ ಯಾವ ರೀತಿ ಹೋಗಿತ್ತು ಎಂದು ನಾನು ತಿಳಿದುಕೊಂಡಿರುವುದಿಲ್ಲ.

2. ಭಕ್ತಲ ವೆಂಕಟಯ್ಯ ಎಂದರೆ ನಮ್ಮ ತಾತ. ನನ್ನ ತಾತನಿಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬರು ಮಗಳು ಇರುತ್ತಾರೆ. ನನ್ನ ತಾತ, ನನ್ನ ತಂದೆ ಮತ್ತು ನನ್ನ ತಾಯಿ ದಾವಾ ಸ್ವತ್ತನ್ನು ವಾದಿಗೆ ಕ್ರಯಕ್ಕೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ತಾಯಿಯು ದಿ: 14.05.1965 ರಲ್ಲಿ ಆ ರೀತಿ ವಾದಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಆ ಪ್ರಕಾರವಾಗಿ ವಾದಿಯ ಹೆಸರಿಗೆ ಕಂದಾಯ ದಾಖಲೆಗಳು ಬದಲಾವಣೆಯಾಗಿವೆ ಎಂದರೆ ಸರಿಯಲ್ಲ. ವಾದಿ ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ವಾದಿಯು ನಿರಂತರವಾಗಿ ಸ್ವಾಧೀನಾನುಭವದಲ್ಲಿರುವುದು ನನಗೆ ಗೊತ್ತು ಎಂದರೆ ನಾವು ಸ್ವಾಧೀನದಲ್ಲಿ ಇರುತ್ತೇವೆ.

3. ನನ್ನ ತಂದೆಯು ನನಗೆ ವಿಲ್ ಮಾಡುತ್ತಾರೆ ಎಂದು  ಹೇಳುವ ಪೂರ್ವದಲ್ಲಿ ದಾವ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿ ಇತ್ತು. ನನ್ನ ತಂದೆಗೆ  ಸದರಿ ಸ್ವತ್ತು ಸರ್ಕಾರದಿಂದ ಮಂಜೂರು ಆಗಿರುತ್ತದೆ. ನನ್ನ ತಂದೆಗೆ ದಾವಾ ಸ್ವತ್ತು ಮಂಜೂರು ಆಗಿಲ್ಲ ಎಂದರೆ ಸರಿಯಲ್ಲ. ಆ ರೀತಿ ಮಂಜೂರು ಆಗಿರುವ ಬಗ್ಗೆ ನಾನು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತು ಮೂಲತಃ ನನ್ನ ತಾತನಿಗೆ ಸರ್ಕಾರದಿಂದ ಮಂಜೂರು ಆಗಿತ್ತು, ನನ್ನ ತಂದೆಗೆ ಅಲ್ಲ ಎಂದರೆ ಸರಿಯಲ್ಲ. ನನ್ನ ತಾತನು ದಾವಾ

ಸ್ವತ್ತನ್ನು ವಾದಿಗೆ ಮಾರಾಟ ಮಾಡಿರುವುದರಿಂದ ನಮಗೆ ದಾವಾ ಸ್ವತ್ತಿನ ಮೇಲೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದಿಯು ನ್ಯಾಯಾಲಯಕ್ಕೆ ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದು ನನಗೆ ಗೊತ್ತಿರುತ್ತದೆ. ಸದರಿ ದಾಖಲೆಗಳು ಯಾವುದು ಎಂದರೆ ಸಾಕ್ಷಿಯು ಮೌನವಾಗಿರುತ್ತಾರೆ. ನನ್ನ ತಂದೆಯು ಬರೆದುಕೊಟ್ಟ ಕ್ರಯ ಪತ್ರವನ್ನು ವಾದಿಯು ಹಾಜರುಪಡಿಸಿರುತ್ತಾರೆ ಎಂದರೆ ಆ ರೀತಿ ಕ್ರಯ ಪತ್ರ ಬರೆದುಕೊಟ್ಟಿರುವುದಿಲ್ಲ. ವಾದಿಯು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯ ದಾಖಲೆಗಳನ್ನು ಹಾಜರುಪಡಿಸಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ದಾವಾ ಸ್ವತ್ತಿನ ಮೇಲೆ ನಮ್ಮ ಕುಟುಂಬದ ಸದಸ್ಯರು ದಾವೆ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನನಗೆ ಗೊತ್ತಿರುತ್ತದೆ. ನನ್ನ ತಾತನು ದಾವಾ ಸ್ವತ್ತನ್ನು ಬಿಡಿಸಿಕೊಡುವಂತೆ ಕೋರಿ ಎ.ಸಿ. ರವರ ನ್ಯಾಯಾಲಯದಲ್ಲಿ ಎಸ್.ಟಿ.ಎಲ್. 25/1990-91 ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿಯು ಊರ್ಜಿತವಲ್ಲ ಎಂದು ಎ.ಸಿ. ರವರು ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾತನು ಎಸ್.ಟಿ.ಎಲ್. 26/1990-91 ರಂತೆ ಮತ್ತೊಂದು ಮೇಲ್ಮನವಿಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಮೇಲ್ಮನವಿಯು ಸಹ ಊರ್ಜಿತವಲ್ಲ ಎಂದು ಎ.ಸಿ. ರವರು ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾತನು ಪಿ.ಟಿ.ಸಿ.ಎಲ್. ನಂ. 47/1991-92 ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಮೇಲ್ಮನವಿಯು ದಿ: 16.05.1994 ರಂದು ವಜಾ ಆಗಿದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆ ರೀತಿ ಮೇಲ್ಮನವಿಗಳು ವಜಾ ಆಗಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಮಳವಳ್ಳಿ.